ಕರ್ನಾಟಕ ಸರ್ಕಾರ

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ತಾಂಶಿನಿ 03 ಸಿಡಿಸಿ(1) 2019–20

ಆಯುಕ್ತರ ಕಚೇರಿ
ಅರಮನೆ ರಸ್ತೆ, ಬೆಂಗಳೂರು–560 001.
ದಿನಾಂಕ: 10–05–2021.

## ಸುತ್ತೋಲೆ

ವಿಷಯ: 2021–22ನೇ ಸಾಲಿನಿಂದ 2ನೇ ವರ್ಷದ ಡಿಪ್ಲೊಮಾ ಪ್ರೋಗ್ರಾಂಗಳಿಗೆ ಅಳವಡಿಸಬೇಕಾಗಿರುವ ಪರಿಷ್ಕೃತ ಪಠ್ಯಕ್ರಮಗಳ (ಕರಡು) ಬಗ್ಗೆ ವಿಷಯ ತಜ್ಞರು / ಹಳೆವಿದ್ಯಾರ್ಥಿಗಳು / ಔದ್ಯೋಗಿಕ ಕ್ಷೇತ್ರಗಳ ಪರಿಣಿತರಿಂದ ಅಭಿಪ್ರಾಯಗಳನ್ನು ಕ್ರೋಡೀಕರಿಸುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2020–21ನೇ ಸಾಲಿನಿಂದ ರಾಜ್ಯದ ಡಿಪ್ಲೊಮಾ ಪ್ರೋಗ್ರಾಂಗಳ ಪಠ್ಯಕ್ರಮಗಳನ್ನು ಪರಿಷ್ಕರಿಸಿದ್ದು, ಎರಡನೇ ವರ್ಷ ಡಿಪ್ಲೊಮಾ ವ್ಯಾಸಂಗದಲ್ಲಿ ಅಳವಡಿಸಲು ಉದ್ದೇಶಿಸಿರುವ 1. Mechanical Engg. 2. Civil Engg. 3. E&E Engg., 4. E&C Engg., 5. CS & Engg., 6. Automobile Engg., ಪ್ರೋಗ್ರಾಂಗಳ ಕರಡು ಪಠ್ಯಕ್ರಮಗಳನ್ನು ವಿವಿಧ ವಿಷಯ ತಜ್ಞರು ಮತ್ತು ಔದ್ಯೋಗಿಕ ಕ್ಷೇತ್ರಗಳಲ್ಲಿರುವ ವಿಷಯ ಪರಿಣಿತರ ಮುಖೇನ ತಯಾರಿಸಲಾಗಿದೆ.

ಮೇಲ್ಕಂಡ ಎರಡನೇ ವರ್ಷದ ಕರಡು ಪಠ್ಯಕ್ರಮಗಳನ್ನು ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದು, ಸದರಿ ಕರಡು ಪಠ್ಯಕ್ರಮಗಳ ಬಗ್ಗೆ ಸಕಾರಾತ್ಮಕ ಅಭಿಪ್ರಾಯಗಳನ್ನು 25/05/2021ರ ಒಳಗಾಗಿ ಈ ಕೆಳಕಂಡ ಗೂಗಲ್ ಫೋರ್ಮ್ ಲಿಂಕ್ ಮುಖಾಂತರ ಸಲ್ಲಿಸಲು ಸೂಚಿಸಿದೆ.

https://forms.gle/xQRm4FxujEYiKdVd7

ಸದರಿ ವಿಷಯವಾಗಿ ಪ್ರಾಚಾರ್ಯರು ಸಂಸ್ಥೆಯ ಹಳೆ ವಿದ್ಯಾರ್ಥಿ ಸಂಘ / ಇಂಡಸ್ಟ್ರಿ ಇನ್‌ಸ್ಟಿಟ್ಯೂಟ್ ಇಂಟರಾಕ್ಷನ್ ಸೆಲ್‌ಗಳ ಸಭೆ ಕರೆದು ಸಕಾರಾತ್ಮಕ ಅಭಿಪ್ರಾಯಗಳನ್ನು ನಿಗದಿತ ದಿನಾಂಕದ ಒಳಗೆ ಸಲ್ಲಿಸಲು ಸೂಕ್ತ ಕ್ರಮ ವಹಿಸುವಂತೆ ನಿರ್ದೇಶಿಸಲಾಗಿದೆ.

ಜಂಟಿ ನಿರ್ದೇಶಕರು (ಸಿಡಿಸಿ)

ಗೆ:

1. ರಾಜ್ಯದ ಎಲ್ಲಾ ಸರ್ಕಾರಿ / ಅನುದಾನಿತ / ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ: ಸೂಕ್ತ ಕ್ರಮಕ್ಕಾಗಿ ಹಾಗು ಅಭಿಪ್ರಾಯಕ್ಕಾಗಿ.
2. ಮಾನ್ಯ ಆಯುಕ್ತರ ಆಪ್ತ ಶಾಖೆ– ಮಾಹಿತಿಗಾಗಿ.
3. ಆಯುಕ್ತಾಲಯದ ಎಲ್ಲಾ ಅಧಿಕಾರಿಗಳು– ಸೂಕ್ತ ಅಭಿಪ್ರಾಯಕ್ಕಾಗಿ.
4. ಇ–ಗೌವರ್ನೆನ್ಸ್ ವಿಭಾಗ– ತಾಂತ್ರಿಕ ಶಿಕ್ಷಣ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.

Scanned with CamScanner